# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:19-03-2025ರಂದು ಬುಧವಾರ ಪೂರ್ವಾಹ್ನ 11.00 ಘಂಟೆಗೆ ಬೆಂಗಳೂರಿನ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಸಭಾಂಗಣದಲ್ಲಿ ನಡೆದ 2024-25ನೇ ಆರ್ಥಿಕ ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳು.

| ಹಾಜರಾದ ಸದಸ್ಯರು : | ಪದನಾಮ |
|---|---|
| 1. **ಪ್ರೊ. ಶರತ್ ಅನಂತಮೂರ್ತಿ**<br>ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. **ಶ್ರೀಮತಿ ಉಮಾ. ಕೆ**<br>ಜಂಟಿ ಕಾರ್ಯದರ್ಶಿಗಳು<br>ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ,<br>ವಿಧಾನಸೌಧ, ಬೆಂಗಳೂರು | ಸದಸ್ಯರು |
| 3. **ಶ್ರೀ ಎನ್. ಕುಮಾರ್**<br>ಸರ್ಕಾರದ ಉಪಕಾರ್ಯದರ್ಶಿಗಳು<br>(ತಾಂತ್ರಿಕ ಶಿಕ್ಷಣ ಮತ್ತು ಯೋಜನೆ)<br>ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 4. **ಶ್ರೀ ಬಸವರಾಜ. ಎಸ್.**<br>ನಿರ್ದೇಶಕರು<br>ಯೋಜನಾ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 5. **ಶ್ರೀ ಶಿವಕುಮಾರ**<br>ಸಿಂಡಿಕೇಟ್ ಸದಸ್ಯರು | ಸದಸ್ಯರು |
| 6. **ಶ್ರೀ. ಡಿ. ಎಸ್. ಅರುಣ್.**<br>ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು | ಸದಸ್ಯರು |
| 7. **ಶ್ರೀ ಎ. ಎಲ್. ಮಂಜುನಾಥ್.** ಕೆ. ಎ. ಎಸ್. ಸೂಪರ್ ಟೈಮ್ ಸ್ಕೇಲ್<br>ಕುಲಸಚಿವರು (ಆಡಳಿತ) | ಸದಸ್ಯರು |
| 8. **ಪ್ರೊ. ಗೋಪಿನಾಥ್. ಎಸ್. ಎಂ.**<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 9. **ಪ್ರೊ. ಹೆಚ್. ಎನ್. ರಮೇಶ**<br>ಹಣಕಾಸು ಅಧಿಕಾರಿಗಳು | ಸದಸ್ಯ ಕಾರ್ಯದರ್ಶಿಗಳು |

ಪ್ರಸ್ತಾವನೆ:

ಪ್ರಾರಂಭದಲ್ಲಿ ಹಣಕಾಸು ಅಧಿಕಾರಿಗಳು 2024-25ನೇ ಸಾಲಿನ ಆರ್ಥಿಕ ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಮತ್ತು ಇತರೆ ಸದಸ್ಯರನ್ನು ಸ್ವಾಗತಿಸಿದರು. ನಂತರ ಸಭೆಯ ಅಧ್ಯಕ್ಷರ ಅನುಮತಿಯನ್ನು ಪಡೆದು ಸಭಾ ಕಾರ್ಯಸೂಚಿಯಂತೆ ಕಾರ್ಯಕಲಾಪಗಳನ್ನು ಕೈಗೆತ್ತಿಕೊಳ್ಳಲಾಯಿತು.

| | |
|---|---|
| **2024-ಹಸ:3:1** | **ದಿನಾಂಕ:06-02-2025ರಂದು ನಡೆದ 2024-25ನೇ ಹಣಕಾಸು ವರ್ಷದ ದ್ವಿತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ದೃಢೀಕರಣ.** |
| ನಿರ್ಣಯ: | ದಿನಾಂಕ:06-02-2025ರಂದು ನಡೆದ 2024-25ನೇ ಹಣಕಾಸು ವರ್ಷದ ದ್ವಿತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಪರಿಶೀಲಿಸಿ ದೃಢೀಕರಿಸಿತು. |
| **2024-ಹಸ:3:2** | **ದಿನಾಂಕ06-02-2025ರಂದು ನಡೆದ 2024-25ನೇ ಹಣಕಾಸು ವರ್ಷದ ದ್ವಿತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.** |
| ನಿರ್ಣಯ: | ದಿನಾಂಕ:06-02-2025ರಂದು ನಡೆದ 2024-25ನೇ ಹಣಕಾಸು ವರ್ಷದ ದ್ವಿತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಸಭೆಯು ಅನುಮೋದಿಸಿತು. |
| **2024-ಹಸ:3:3** | **2025-26ನೇ ಆರ್ಥಿಕ ವರ್ಷದ ಆಯ-ವ್ಯಯ ಅಂದಾಜು ಅನುಮೋದನೆ ಕುರಿತು.** |
| ಚರ್ಚೆ | ಹಣಕಾಸು ಅಧಿಕಾರಿಯವರು 2025-26ನೇ ಆರ್ಥಿಕ ವರ್ಷದ ಆಯ-ವ್ಯಯದ ಅಂದಾಜನ್ನು ಸಭೆಯ ಮುಂದೆ ಮಂಡಿಸಿದರು.<br>ಸಭೆಯು ಕೂಲಂಕಷವಾಗಿ ಪರಿಶೀಲಿಸಿ, ಆಯ-ವ್ಯಯದ ಸ್ವೀಕೃತಿ ಭಾಗದಲ್ಲಿ ವಿಶ್ರಾಂತಿ ವೇತನಗಳಿಗೆ ಸರ್ಕಾರದಿಂದ ನಿರೀಕ್ಷಿತ ಅನುದಾನ ರೂ. 2730.00 ಲಕ್ಷಗಳೆಂದು ಹಾಗೂ ಖಾಲಿ ಇರುವ ಅಧ್ಯಾಪಕ ಮತ್ತು ಅಧ್ಯಾಪಕೇತರರ ಹುದ್ದೆಗಳಿಗೆ ಎದುರಾಗಿ ನೇಮಕ ಮಾಡಿಕೊಂಡಿರುವ ಅತಿಥಿ ಉಪನ್ಯಾಸಕರಗಳ ಮತ್ತು ಹೊರಗುತ್ತಿಗೆ ನೌಕರರುಗಳಿಗೆ ಸರ್ಕಾರದಿಂದ ನಿರೀಕ್ಷಿತ ಅನುದಾನ ರೂ.571.78ಲಕ್ಷಗಳೆಂದು ಅಂದಾಜಿಸಿರುವುದನ್ನು ಜಂಟಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ ಇವರು ಸಭೆಯ ಗಮನಕ್ಕೆ ತಂದರು. ಮುಂದುವರೆದು ಸರ್ಕಾರವು ತನ್ನ ಆಯ-ವ್ಯಯದಲ್ಲಿ ಈಗಾಗಲೇ ವಿಶ್ವವಿದ್ಯಾಲಯಕ್ಕೆ ಅನುದಾನವನ್ನು ಈಗಾಗಲೇ ಘೋಷಿಸಿರುವುದರಿಂದ ಸರ್ಕಾರದಿಂದ ನಿರೀಕ್ಷಿತವೆಂದು ಸ್ವೀಕೃತಿ ಭಾಗದಲ್ಲಿ ತೋರಿಸಿಕೊಂಡು ಆಯ-ವ್ಯಯವನ್ನು ತಯಾರಿಸಲು ಅವಕಾಶವಿರುವುದಿಲ್ಲವೆಂಬ ಅಂಶವನ್ನು ಸಭೆಗೆ ತಿಳಿಸಿದರು.<br>ಹಣಕಾಸು ಅಧಿಕಾರಿಗಳು ಮಾತನಾಡಿ ವಿಶ್ವವಿದ್ಯಾಲಯದಿಂದ ರಾಜ್ಯ ಸರ್ಕಾರಕ್ಕೆ ವಿಶ್ರಾಂತಿ ವೇತನಗಳಿಗೆ ರೂ.2898.05 ಲಕ್ಷಗಳ ಅನುದಾನಕ್ಕೆ ಬೇಡಿಕೆ ಸಲ್ಲಿಸಲಾಗಿತ್ತು. ಆದರೆ ಘನ ಸರ್ಕಾರವು ರೂ. 1000.00 ಲಕ್ಷಗಳನ್ನು ಮಾತ್ರ ಬಿಡುಗಡೆ ಮಾಡಿರುತ್ತದೆ. ಇದರಿಂದಾಗಿ ವಿಶ್ವವಿದ್ಯಾಲಯಕ್ಕೆ ರೂ. 1898.05 ಲಕ್ಷಗಳ ಕೊರತೆ ಉಂಟಾಗಿರುತ್ತದೆ. ಅಲ್ಲದೆ 2024-25ನೇ ಆರ್ಥಿಕ ವರ್ಷದಲ್ಲೂ ಸಹ ಘನ ಸರ್ಕಾರವು ವಿಶ್ವವಿದ್ಯಾಲಯಕ್ಕೆ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು. |

ಸರ್ಕಾರದ ಉಪಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರು ಮಾತನಾಡಿ ರಾಜ್ಯ ಸರ್ಕಾರದಿಂದ ಹೆಚ್ಚುವರಿ ಸಹಾಯನುದಾನವನ್ನು ಬಿಡುಗಡೆಗೊಳಿಸಲು ಕೆಲವು ಮಾಹಿತಿಗಳನ್ನು ಕೋರಿ ವಿಶ್ವವಿದ್ಯಾಲಯಕ್ಕೆ ಪತ್ರ ಬರೆಯಲಾಗಿದೆ ಎಂಬ ವಿಷಯವನ್ನು ಸಭೆಗೆ ತಿಳಿಸಿದರು.

ಮಾನ್ಯ ಕುಲಸಚಿವರು ಮಾತನಾಡಿ ಈಗಾಗಲೇ ಹೊರಗುತ್ತಿಗೆ ಸಂಬಂಧಿಸಿದಂತೆ ಟೆಂಡರ್ ಕರೆಯಲಾಗಿದೆ. ಸುಮಾರು 110 ಸಂಖ್ಯೆಯ ಗುತ್ತಿಗೆ ನೌಕರರನ್ನು ಕಡಿತಗೊಳಿಸಲಾಗುವುದೆಂದು ಹಾಗೂ ಟೆಂಡರ್ ಪ್ರಕ್ರಿಯೆಯು ಜಾಲ್ತಿಯಲ್ಲಿದ್ದು ಮಾರ್ಚ್-2025 ಮಾಹೆಯಲ್ಲಿ ಪೂರ್ಣಗೊಳಿಸಲಾಗುವುದೆಂದು ಸಭೆಯ ಗಮನಕ್ಕೆ ತಂದರು. ಮುಂದುವರೆದು ಖಾಲಿ ಇರುವ ಅಧ್ಯಾಪಕರಗಳ ಹುದ್ದೆಗಳಿಗೆ ಎದುರಾಗಿ ನೇಮಕ ಮಾಡಿಕೊಂಡಿರುವ ಅತಿಥಿ ಉಪನ್ಯಾಸಕರುಗಳ ವೇತನಗಳಿಗೆ ಅನುದಾನವನ್ನು ನೀಡುವಂತೆ ಸರ್ಕಾರಕ್ಕೆ ಸಲ್ಲಿಸಲು ಸಿದ್ಧಪಡಿಸಿರುವ ಪ್ರಸ್ತಾವನೆಯನ್ನು ಸಭೆಯ ಗಮನಕ್ಕೆ ತಂದರು. ಸಭೆಯು ಅತಿಥಿ ಉಪನ್ಯಾಸಕರುಗಳ ಕಾರ್ಯಭಾರದ ಹಂಚಿಕೆಯನ್ನು ಪುನ: ಪರಿಶೀಲಿಸುವಂತೆ ತಿಳಿಸಿದರು. ಈ ಹಿನ್ನಲೆಯಲ್ಲಿ ಮಂಡಿಸಲಾಗಿರುವ ಆಯ-ವ್ಯಯವನ್ನು ಈ ಕೆಳಗಿನಂತೆ ಪರಿಷ್ಕರಿಸಲಾಯಿತು.

| ಸ್ವೀಕೃತಿ(ರೂ. ಲಕ್ಷಗಳಲ್ಲಿ | ವೆಚ್ಚ(ರೂ. ಲಕ್ಷಗಳಲ್ಲಿ) | ಕೊರತೆ (ರೂ. ಲಕ್ಷಗಳಲ್ಲಿ) |
|---|---|---|
| 13384.81 | 17110.93 | 3726.12 |

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ. ಡಿ. ಎಸ್. ಅರುಣ್‌ರವರು ಮಾತನಾಡಿ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳು ಆರ್ಥಿಕ ಸಂಕಷ್ಟದಲ್ಲಿವೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು. ಸರ್ಕಾರದ ಪ್ರತಿನಿಧಿಗಳು ತಿಳಿಸಿರುವಂತೆ ಎಲ್ಲಾ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಿ ಮಾಹಿತಿಯನ್ನು ನೀಡುವಂತೆ ತಿಳಿಸಿದರು. ಹಾಗೂ ಖಾಲಿಯಿರುವ ಹುದ್ದೆಗಳನ್ನು ಶೀಘ್ರವಾಗಿ ಭರ್ತಿಮಾಡಿಕೊಳ್ಳಲು ಮಾನ್ಯ ಕುಲಪತಿಗಳಿಗೆ ಕೋರಿದರು. ನಂತರ ಕೊರತೆಯನ್ನು ಸರಿದೂಗಿಸಲು ಅಗತ್ಯ ಆಡಳಿತಾತ್ಮಕ ಕ್ರಮವನ್ನು ತೆಗೆದುಕೊಳ್ಳುವಂತೆ ಸಭೆಯು ಸೂಚಿಸಿತು.

ನಿರ್ಣಯ

ಸುಧೀರ್ಘವಾಗಿ ಚರ್ಚಿಸಿದ ನಂತರ ಸಕ್ಷಮ ಪ್ರಾಧಿಕಾರಗಳ ಅನುಮೋದನೆಯನ್ನು ಪಡೆದು ಮೇಲಿನಂತೆ ಕ್ರಮವಹಿಸಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

2024-ಹಸ:3:4

**2024-25ನೇ ಹಣಕಾಸು ವರ್ಷದ ಆಯ-ವ್ಯಯದ ಪುನರ್ ಧನವಿನಿಯೋಗ (ಮರುಹೊಂದಾಣಿಕೆ) ಮತ್ತು ಪೂರಕ ಅನುದಾನ ಕುರಿತು**

ನಿರ್ಣಯ:

2024-25ನೇ ಹಣಕಾಸು ವರ್ಷದ ಆಯ-ವ್ಯಯದಲ್ಲಿ ಕೊರತೆಯಾಗಿರುವ ಅನುದಾನವನ್ನು ಜ್ಞಾನ ಸಹ್ಯಾದ್ರಿಯ ಶೈಕ್ಷಣಿಕ ವೆಚ್ಚಗಳು, ಆಡಳಿತಾತ್ಮಕ ವೆಚ್ಚಗಳು ಮತ್ತು ವಿದ್ಯಾರ್ಥಿ ಬೆಂಬಲ ವೆಚ್ಚಗಳ ಶೀರ್ಷಿಕೆಗಳಿಗೆ ಕೊರತೆಯಾಗಿರುವ ಅನುದಾನವನ್ನು 2024-25ನೇ ಆರ್ಥಿಕ ವರ್ಷದಲ್ಲಿ ಉಳಿಕೆಯಾಗಲಿರುವ ಪರೀಕ್ಷಾ ಶೀರ್ಷಿಕೆಯಿಂದ ಒಟ್ಟಾರೆ ರೂ. 50.00ಲಕ್ಷಗಳನ್ನು ಪ್ರಪತ್ರ-22ಎ (ಅನುಚ್ಛೇದ-308, ಕೆ.ಎಫ್.ಸಿ)ರ ಪ್ರಕಾರದಂತೆ ಪುನರ್ ಧನ ವಿನಿಯೋಗ ಮಾಡಿಕೊಳ್ಳಲು ಸಭೆಯು ಅನುಮೋದನೆ ನೀಡಿತು.

| | |
|---|---|
| | |
| 2024–ಹಸ:3:5 | **ದೈಹಿಕ ಶಿಕ್ಷಣ ವಿಭಾಗಕ್ಕೆ ಆಯ–ವ್ಯಯದಲ್ಲಿ ಅನುದಾನ ನಿಗದಿಪಡಿಸುವ/ಮರು ಹೊಂದಾಣಿಕೆ ಮಾಡಿಕೊಳ್ಳುವ ಕುರಿತು.** |
| ನಿರ್ಣಯ: | ದೈಹಿಕ ಶಿಕ್ಷಣ ವಿಭಾಗಕ್ಕೆ ಆಯ–ವ್ಯಯದಲ್ಲಿ ಅನುದಾನ ನಿಗದಿಪಡಿಸುವ ಹಾಗೂ ಮರುಹೊಂದಾಣಿಕೆ ಮಾಡಲು ಹಣಕಾಸು ಅಧಿಕಾರಿಗಳು ಸಭೆಯನ್ನು ಕೋರಿದರು. ಸರ್ಕಾರದ ಪ್ರತಿನಿಧಿಗಳು ಮಾತನಾಡುತ್ತಾ ಈಗಾಗಲೇ ಆರ್ಥಿಕ ವರ್ಷ ಅಂತಿಮ ಹಂತದಲ್ಲಿರುವುದರಿಂದ ಈಗ ಹಾಲಿ ಇರುವ ಶೀರ್ಷಿಕೆಗಳನ್ನು ಮುಂದುವರಿಸಿ ಮುಂದಿನ ಆರ್ಥಿಕ ವರ್ಷಕ್ಕೆ ಪ್ರಥಮ ಆದ್ಯತೆ ಮೇಲೆ ಕ್ರೀಡಾ ಶೀರ್ಷಿಕೆಗೆ ಅನುದಾನ ಒದಗಿಸಲು ತಿಳಿಸಿದರು.<br>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ. ಡಿ. ಎಸ್. ಅರುಣ್‌ರವರು ಕ್ರೀಡಾ ಚಟುವಟಿಕೆಗೆಳಿಗೆ ಹೆಚ್ಚಿನ ಅನುದಾನವನ್ನು ಒದಗಿಸಲು ಸಹ ಕೋರಿದರು. ನಂತರ ಹಣಕಾಸು ಅಧಿಕಾರಿಗಳು ಮಾತನಾಡಿ 2025–26ನೇ ಆರ್ಥಿಕ ವರ್ಷಕ್ಕೆ ಕ್ರೀಡಾ ಶೀರ್ಷಿಕೆಗೆ ರೂ. 60.00ಲಕ್ಷಗಳು ಒದಗಿಸಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು. |
| 2024–ಹಸ:3:6 | **ವಿಶ್ವವಿದ್ಯಾಲಯದ ಸ್ನಾತಕ/ ಸ್ನಾತಕೋತ್ತರ ವಿಭಾಗಗಳಲ್ಲಿರುವ ಅಧ್ಯಾಪಕರುಗಳಿಗೆ UGC Notification F/9-1/ 2010CPS/MISC pt. Vol-II ಅನ್ನು ವಿಶ್ವವಿದ್ಯಾಲಯಕ್ಕೆ ಯಥಾವತ್ತಾಗಿ ಅಳವಡಿಸಿಕೊಳ್ಳುವ ಕುರಿತು.** |
| ನಿರ್ಣಯ: | ಸದರಿ ವಿಷಯ ಕಾರ್ಯಸೂಚಿಯಲ್ಲಿ ಸೇರ್ಪಡೆಯಿಲ್ಲದಿರುವ ಹಿನ್ನಲೆಯಲ್ಲಿ ಮುಂದೂಡಲಾಯಿತು. |
| 2024–ಹಸ:3:7 | **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು.**<br>**–ಯಾವುದೂ ಇರುವುದಿಲ್ಲ –** |
| | ಅಂತಿಮವಾಗಿ ಸಭೆಗೆ ಆಗಮಿಸಿ ತಮ್ಮ ಅತ್ಯಮೂಲ್ಯ ಸಲಹೆ/ ಸಹಕಾರಗಳನ್ನು ನೀಡಿದ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ ಹಣಕಾಸು ಅಧಿಕಾರಿಯವರು ವಂದಿಸಿದ ನಂತರ ಸಭೆಯು ಮುಕ್ತಾಯಗೊಂಡಿತು. |
| | (ಪ್ರೊ. ಹೆಚ್. ಎನ್.ರಮೇಶ)<br>**ಹಣಕಾಸು ಅಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿಗಳು**<br><br>**ಸಹಿ/–**<br>**(ಪ್ರೊ. ಶರತ್ ಅನಂತಮೂರ್ತಿ)**<br>**ಕುಲಪತಿಗಳು ಹಾಗೂ ಅಧ್ಯಕ್ಷರು** |